## ಆಹಾ ಸುದ್ದಿ!

★ ಸಸಿತೋಟ



ಈತ ರಷ್ಯಾದ ವಾಕೊ. ನಾವು ನೀರಿನಲ್ಲಿ ಒಂದು ಡೈವ್ ಹೊಡೆಯುವ ಸಮಯದಲ್ಲೇ ಈತ ರೂಬಿಕ್ ಕ್ಯೂಬ್ ಸಮಸ್ಯೆಯನ್ನು ಪರಿಹರಿಸಿಬಿಡುತ್ತಾನಂತೆ. ಅದೂ ನೀರಿನಲ್ಲಿ ಕೂತು ಒಂದು ನಿಮಿಷ 44 ಸೆಕೆಂಡಿನಲ್ಲಿ ಕ್ಯೂಬ್ ಸರಿಯಾಗಿ ತಿರುಗಿಸಿದ ಈತ ಸದ್ಯ ಗಿನ್ನೆಸ್ ದಾಖಲೆಯ ಬೆನ್ನು ಹತ್ತಿದ್ದಾನಂತೆ.

ನೆದರ್ಲೆಂಡ್‌ನಲ್ಲೊಂದು ಹೋಟೆಲ್ ಇದೆ. ವಿಶೇಷವಿರಬಹುದೆಂದು ಅಲ್ಲಿಗೆ ಧಾವಿಸಿದರೆ ನಿಮಗೆ ಪ್ರವೇಶವಿಲ್ಲ. ವಿಚ್ಛೇದನದ ಉದ್ದೇಶವಿಟ್ಟುಕೊಂಡವರು ಮಾತ್ರ ಅಲ್ಲಿ ವಾಸ್ತವ್ಯ ಹೂಡಬಹುದಂತೆ. ಅದರ ಹೆಸರೇ 'ಡಿವೋರ್ಸ್ ಡಾಟ್ ಕಾಂ'. ಅಲ್ಲಿ ಪರಿಚಾರಕರ ಬದಲು ವಕೀಲರು ಇರುತ್ತಾರಂತೆ, ಗ್ರಾಹಕರ ಸೇವೆಗೆ.





ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್ ಅಂದರೆ ಜನ ಜೇನ್ನೊಣಗಳಂತೆ ಮುತ್ತುತ್ತಾರಂತೆ. ಆದರೆ ಕಳೆದ ವಾರ ಜನರಿಗೆ ಪೈಪೋಟಿ ಎಂಬಂತೆ ಜೇನ್ನೊಣಗಳು ಅಲ್ಲಿಗೆ ದಾಳಿಯಿಟ್ಟವಂತೆ. ಆಗಲಾದರೂ ಖಾಲಿ ಖಾಲಿ ಸ್ಕ್ವೇರ್ ಅನ್ನು ನೋಡಬಹುದು, ಜೊತೆಗೆ ಜೇನ್ನೊಣಗಳ ಜೊತೆ ಸೆಲ್ಫಿ ತೆಗೆದುಕೊಳ್ಳಬಹುದು ಎಂದು ಸಾವಿರಾರು ಜನ ಅಲ್ಲಿಗೆ ಧಾವಿಸಿದರಂತೆ. ಪರಿಣಾಮ, ಜೇನ್ನೊಣಗಳು ಮನುಷ್ಯರಿಗೆ ಮುತ್ತಿಕ್ಕುವ ತಮ್ಮ ಚಟ ತೀರಿಸಿಕೊಂಡವಂತೆ.



ಇದು ಸ್ವಿಝರ್ಲೆಂಡ್‌ನ ಇಬ್ಬರು ಸಹೋದರರು ತಯಾರಿಸಿದ ಗುಳ್ಳೆ ಕಾರು ಮೈಕ್ರೊಲಿನೊ. 56 ವರ್ಷಗಳ ಹಿಂದೆ ಬಿಎಂಡಬ್ಲು ಸ್ಥಗಿತಗೊಳಿಸಿದ ಈ ಮಾದರಿಯ ಕಾರಿನ ಸುಧಾರಿತ ರೂಪವಂತೆ. ನ್ಯಾನೊ ಕಾರಿಗಿಂತ ಸಣ್ಣದು ಈ ಎಲೆಕ್ಟ್ರಿಕ್ ಕಾರು. ಅಂದರೆ ನಮ್ಮ ಬೆಂಗಳೂರಿನ ಫುಟ್‌ಪಾತ್ ಮೇಲೆ ಓಡಿಸುವಷ್ಟು!

ತೈವಾನಿನ ಈ ಸುಂದರಿಯರು ತಾಯಿ ಮತ್ತು ಮಕ್ಕಳು. ವಯಸ್ಸನ್ನು ಊಹಿಸಿ ಎಂದರೆ ಎಲ್ಲರೂ 25ರ ಆಸುಪಾಸು ಎಂದರಂತೆ. ಇವರ ಸೌಂದರ್ಯದ ರಹಸ್ಯ ಬ್ಯೂಟಿ ಪಾರ್ಲರ್ ಅಲ್ಲ, ನೀರು ಮತ್ತು ತರಕಾರಿ ಸೇವನೆ. ಬೆಳಿಗ್ಗೆ ಎದ್ದ ಕೂಡಲೇ ಬಿಸಿ ನೀರು ಕುಡಿಯುವುದರಿಂದ ತ್ವಚೆಗೆ ತೇವಾಂಶ ಸಿಗುತ್ತದೆ ಎಂದು ಟಿವಿಯಲ್ಲಿ ಗುಟ್ಟು ಬಿಟ್ಟುಕೊಟ್ಟಿದ್ದಾರಂತೆ. ಅಲ್ಲಿ ಇಬ್ಬರು ಮಹಿಳೆಯರು ಭೇಟಿಯಾದರೆ ಸಾಕು, ಮಾತು ನೀರಿನ ಸುತ್ತಲೇ ಗಿರಕಿ ಹೊಡೆಯುತ್ತದಂತೆ.




ಆಸ್ಟ್ರೇಲಿಯಾದ ಸ್ಟೀಫನ್ ಮ್ಯಾಂಡೆಲ್ ಒಂದಲ್ಲ, 14 ಬಾರಿ ಲಾಟರಿ ಗೆದ್ದಿದ್ದಾನಂತೆ. ಅದೃಷ್ಟದಿಂದಲ್ಲ, ಗಣಿತದ ಲೆಕ್ಕಾಚಾರದಿಂದ ಈ ಗಣಿತ ತಜ್ಞ ಲಾಟರಿ ಗೆಲ್ಲುತ್ತಿದ್ದಾನಂತೆ. ಗೆಲ್ಲುವ ಲಾಟರಿ ಟಿಕೆಟ್ ಸಂಖ್ಯೆಗಳನ್ನು ನಿಖರವಾಗಿ ಹೇಳುವ ಈತನಿಂದಾಗಿಯೇ ಆಸ್ಟ್ರೇಲಿಯಾದಲ್ಲಿ ಲಾಟರಿ ಟಿಕೆಟ್ ನಿಯಮಗಳನ್ನು ಬದಲಿಸಿದ್ದಾರಂತೆ. ಸರ್ಕಾರ ಚಾಪೆಯ ಅಡಿ ತೂರಿದರೆ, ಈತ ರಂಗೋಲಿಯಡಿ ನುಸುಳುತ್ತಿದ್ದಾನಂತೆ. ಈಗ ಅಮೆರಿಕ, ಬ್ರಿಟನ್ ಮೊದಲಾದ ಕಡೆ ಲಾಟರಿ ಗೆಲುವಿನ ಓಟ ಮುಂದುವರಿಸಿದ್ದಾನಂತೆ ಈ ಲಾಟರಿ ವೀರ.